# ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005
# ಇಂಗ್ಲಿಷ್ ಭಾಷಾ ಬೋಧನೆ ಸ್ಥಿತಿಗತಿ ಕುರಿತಾದ ಪ್ರಬಂಧದ ಸಾರಾಂಶ

ಭಾರತದಲ್ಲಿ ಆಂಗ್ಲಭಾಷೆಯೆಂದರೆ ಬಹುಭಾಷೆಗಳ ದೇಶದಲ್ಲಿರುವ ಜಾಗತಿಕ ಭಾಷೆ. ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಕರಿಗಿರುವ ಪ್ರೌಢಿಮೆ ಹಾಗೂ ವಿದ್ಯಾರ್ಥಿಗಳಿಗೆ ಶಾಲೆಯಿಂದ ಹೊರಗೆ ಇಂಗ್ಲಿಷ್ ಭಾಷೆಗೆ ಸಿಗುವ/ಸಿಗದಿರುವ ಒಡ್ಡಿಕೆ(ಎಕ್ಸ್‌ಪೋಷರ್)ಗಳಿಂದಾಗಿ ಇಲ್ಲಿ ಇಂಗ್ಲಿಷ್ ಭಾಷಾ ಬೋಧನೆಯ ಸಂದರ್ಭಗಳು ವೈವಿಧ್ಯಮಯವೂ ವಿಶಾಲ ಹರವುಳ್ಳವೂ ಆಗಿವೆ. ಇಂಗ್ಲಿಷ್ ಭಾಷೆಯನ್ನು ಯಾವ ಹಂತದಲ್ಲಿ ಪರಿಚಯಿಸಲಾಗುತ್ತಿದೆ ಎನ್ನುವುದು ಈಗ ಶೈಕ್ಷಣಿಕ ಸಾಧ್ಯತೆಗಳ ವಿಷಯಕ್ಕಿಂತಲೂ ಜನರ ಆಸೆ ಆಕಾಂಕ್ಷೆಗಳಿಗೆ ನೀಡುವ ಒಂದು ರಾಜಕೀಯ ಪ್ರತಿಕ್ರಿಯೆಯಾಗಿಬಿಟ್ಟಿದೆ. ಇಂಗ್ಲಿಷನ್ನು ತಡವಾಗಿ ಆದರೆ ಪರಿಣಾಮಕಾರಿಯಾಗಿ ಪರಿಚಯಿಸಬೇಕು ಎನ್ನುವ ಸದ್ಯ ಚಾಲ್ತಿಯಲ್ಲಿರುವ ಶೈಕ್ಷಣಿಕ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಲೇ, ದತ್ತ ಸಂದರ್ಭಗಳಲ್ಲಿ ಯಾವುದು ಸಾಧ್ಯ ಎಂಬುದನ್ನೂ ವಿವರಿಸುತ್ತಾ, ಅಗತ್ಯವಿದ್ದಲ್ಲಿ ಕ್ರಿಯೆಯ ದೃಷ್ಟಿಯಿಂದ ಸಮರ್ಥನೀಯವಾದ ಮಧ್ಯವರ್ತನೆಗಳನ್ನೂ ಪೂರಕವಾಗಿ ನೀಡಿ ಸದ್ಯದ ವಾಸ್ತವಕ್ಕೂ ಸ್ಪಂದಿಸುತ್ತಿದ್ದೇವೆ.

ಭಾಷಾ ಪಠ್ಯಕ್ರಮಕ್ಕೆ ಎರಡು ಉದ್ದೇಶಗಳಿವೆ: ಸ್ವಾಭಾವಿಕವಾಗಿ ಭಾಷಾ ಕಲಿಕೆಯಲ್ಲಿ ಗಳಿಸಿಕೊಳ್ಳುವಂತಹ ಮೂಲ ಸಾಮರ್ಥ್ಯಗಳನ್ನು ಪಡೆಯುವುದು ಹಾಗೂ ಅಮೂರ್ತ ಚಿಂತನೆ ಹಾಗೂ ಜ್ಞಾನ ಗಳಿಕೆಯ ಸಾಧನವಾಗಿ ಭಾಷೆಯ ಬೆಳವಣಿಗೆ, ಉದಾಹರಣೆಗೆ ಸಾಕ್ಷರತೆ. ತಾರ್ಕಿಕವಾಗಿ ಇದು ವಿವಿಧ ವಿಷಯಗಳು ಹಾಗೂ ಇತರ ಭಾರತೀಯ ಭಾಷೆಗಳ ನಡುವಿನ ಅಂತರಗಳನ್ನು ಮೀರಿ ನಿಲ್ಲುವ ಪಠ್ಯಕ್ರಮವನ್ನು ನಿರೀಕ್ಷಿಸುತ್ತದೆ. ಆರಂಭಿಕ ಹಂತಗಳಲ್ಲಿ ಮಗುವಿನಲ್ಲಿ ಪ್ರಪಂಚದ ಅರಿವನ್ನು ಬೆಳೆಸುವ ಕಲಿಕಾ ಚಟುವಟಿಕೆಗಳನ್ನು ನಡೆಸುವ ವಿವಿಧ ಭಾಷೆಗಳಲ್ಲಿ ಇಂಗ್ಲಿಷ್ ಕೂಡಾ ಒಂದು ಭಾಷೆಯಾಗಿರಬಹುದು; ಆಮೇಲಿನ ಹಂತಗಳಲ್ಲಿ ಎಲ್ಲ ಕಲಿಕೆಯೂ ಭಾಷೆಯ ಮೂಲಕವೇ ಆಗುತ್ತದೆ. ಮೇಲಿನ ಹಂತದ ಭಾಷಾ ಕೌಶಲಗಳು ವಿವಿಧ ಭಾಷೆಗಳಿಗೆ ಸಾಮಾನ್ಯವೇ ಆಗುತ್ತವೆ; ಉದಾಹರಣೆಗೆ, ಓದುವ ಕೌಶಲವು ವರ್ಗಾಯಿಸಬಹುದಾದ ಕೌಶಲವಾಗಿದೆ. ಒಂದು ಭಾಷೆಯಲ್ಲಿ ಈ ಕೌಶಲವನ್ನು ಬೆಳೆಸಿದಾಗ ಅದು ಇನ್ನೊಂದು ಭಾಷೆಯಲ್ಲಿಯೂ ಬೆಳೆಯುತ್ತದೆ, ಅಂತೆಯೇ ಮಾತೃಭಾಷೆಯಲ್ಲಿ ಓದುವ ಕೌಶಲದ ಕೊರತೆ ದ್ವಿತೀಯ ಭಾಷೆಯ ಓದುವ ಕೌಶಲವನ್ನೂ ಪ್ರಭಾವಿಸುತ್ತದೆ. ಇಂಗ್ಲಿಷ್ ಒಂದೇ ಭಾಷೆಯಾಗಿ ಉಳಿದಿಲ್ಲ. ಇಂಗ್ಲಿಷ್ ಭಾಷಾ ಬೋಧನೆಯ ಉದ್ದೇಶ ಎಲ್ಲ ಭಾಷೆಗಳನ್ನೂ ಶ್ರೀಮಂತಗೊಳಿಸಬಲ್ಲ ಬಹುಭಾಷಿಕರನ್ನು ತಯಾರು ಮಾಡುವುದಾಗಿದೆ; ಇದು ಎಲ್ಲರೂ ಬದ್ಧರಾಗಿರಬೇಕಾದ ರಾಷ್ಟ್ರೀಯ ಕಾಣ್ಕೆಯೇ ಆಗಿದೆ.

ಶ್ರೀಮಂತ ಸಂವಹನ ಸಾಧ್ಯತೆಗಳುಳ್ಳ ಪರಿಸರವು ಭಾಷಾ ಕಲಿಕೆಗೆ ಪೂರ್ವಾಪೇಕ್ಷಿತವಾಗಿದೆ. ಕಲಿಕಾದಾರರಿಗೆ ನೀಡಬಹುದಾದ ಕಲಿಕಾ ಸಾಮಗ್ರಿಗಳು ಪಠ್ಯಪುಸ್ತಕಗಳು, ಕಲಿಕಾದಾರರು ಆಯ್ಕೆ ಮಾಡುವ ಪಠ್ಯಗಳು ಹಾಗೂ ವಿವಿಧ ಪ್ರಕಾರಗಳ ಪುಸ್ತಕಗಳನ್ನೊಳಗೊಂಡ ತರಗತಿ ಪುಸ್ತಕಭಂಡಾರಗಳನ್ನು ಒಳಗೊಂಡಿರುತ್ತವೆ. ಮುದ್ರಿತ ಸಾಮಗ್ರಿಗಳು(ಚಿಕ್ಕ ಮಕ್ಕಳಿಗೆ ದೊಡ್ಡ ಅಕ್ಷರಗಳುಳ್ಳ ಪುಸ್ತಕಗಳು), ಪಠ್ಯಪುಸ್ತಕದ ಪಾಠಗಳಿಗೆ ಸಮಾಂತರ ಪಠ್ಯಗಳು, ವಿವಿಧ ಭಾಷೆಗಳಲ್ಲಿರುವ ಸಾಮಗ್ರಿಗಳು, ಪೂರಕವಾದ ಮಾಧ್ಯಮಗಳು(ಪತ್ರಿಕೆಗಳು, ದಿನಪತ್ರಿಕೆಗಳ ಅಂಕಣಗಳು, ರೇಡಿಯೋ ಹಾಗೂ ಧ್ವನಿಸುರುಳಿಗಳು ಹಾಗೂ 'ನೈಜ' ಸಾಮಗ್ರಿಗಳು(ಭಾಷೆಯನ್ನು ಸ್ವಾಭಾವಿಕವಾಗಿಯೇ ಬಳಸಿರುವ ಸಂದರ್ಭಗಳುಳ್ಳ ಕಲಿಕಾ ಸಾಮಗ್ರಿಗಳು– ವಿವರಣೆ ಅನುವಾದಕಕರದ್ದು) ಇಲ್ಲಿ ಲಭ್ಯವಿರಬೇಕು. ಪ್ರತಿಕೂಲ ಪರಿಸ್ಥಿತಿ ಎದುರಿಸುತ್ತಿರುವ/ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗಾಗಿ ಶಾಲೆಗಳನ್ನು ಸಮುದಾಯ ಕಲಿಕಾ ಕೇಂದ್ರಗಳನ್ನಾಗಿ ಬೆಳೆಸಬೇಕು. ಈಗ ಭಾಷಾ ಬೋಧನೆ ಕುರಿತಂತೆ ಅನೇಕ ಯಶೋಗಾಥೆಗಳು ಲಭ್ಯವಿವೆ. ಆದರೆ ಅವುಗಳ ಸಾಮಾನ್ಯೀಕರಣ ಹಾಗೂ

ಉಳಿದೆಡೆಗಳಲ್ಲಿ ಅವುಗಳ ಅನುಷ್ಠಾನ ಕುರಿತಂತೆ ಸಂಶೋಧಿಸಬೇಕಾಗಿದೆ ಹಾಗೂ ಇದಕ್ಕೆ ಪ್ರೋತ್ಸಾಹದ ಅಗತ್ಯವಿದೆ. ವಿವಿಧ ವಿಧಾನಗಳು ಪ್ರತ್ಯೇಕವಾಗಿರದೆ ವಿಶಾಲವಾದ ಜ್ಞಾನಾತ್ಮಕ ಚಿಂತನೆಯಲ್ಲಿ ಒಂದಕ್ಕೊಂದು ಪೂರಕವಾಗಿರಬಹುದು(ವೈಗೋಟ್ಸ್ಕಿ, ಚೋಮ್ಸ್ಕಿ, ಹಾಗೂ ಪಿಯಾಜೆಯ ತತ್ವಗಳನ್ನು ಅಳವಡಿಸಿಕೊಳ್ಳುವುದು). ಮೂಲ ಕೌಶಲಗಳ ಕಲಿಕೆಯನ್ನು ಖಚಿತಪಡಿಸಿಕೊಂಡಬಳಿಕ ಮೇಲಿನ ಹಂತದ ಕೌಶಲಗಳನ್ನು(ಸಾಹಿತ್ಯಿಕ ಆಸ್ವಾದನೆ ಹಾಗೂ ಲಿಂಗ ಸಂಬಂಧೀ ಚಿಂತನೆಯಲ್ಲಿ ಭಾಷೆಯ ಪಾತ್ರವನ್ನೂ ಒಳಗೊಂಡಂತೆ) ಬೆಳೆಸಬಹುದು.

ಶಿಕ್ಷಕರ ಶಿಕ್ಷಣವು ನಿರಂತರವಾಗಿದ್ದು, ಕಾರ್ಯಸ್ಥಳದಲ್ಲಿಯೇ ಲಭ್ಯವಿರುದರೊಂದಿಗೆ ಸೇವಾಪೂರ್ವದಲ್ಲಿಯೇ ಶಿಕ್ಷಕರನ್ನು ತಯಾರಿ ಮಾಡುವಂತೆಯೂ ಇರಬೇಕು. ಭಾಷಾ ಪ್ರೌಢಿಮೆ ಹಾಗೂ ವೃತ್ತಿಯ ಅರಿವುಗಳನ್ನು ಸಮಾನವಾಗಿ ಬೆಳೆಸಬೇಕು. ವೃತ್ತಿಪರ ಅರಿವನ್ನು ಅಗತ್ಯವಿದ್ದಲ್ಲಿ ಶಿಕ್ಷಕರ ಭಾಷೆಯಲ್ಲಿಯೇ ನೀಡಬಹುದು.

ಭಾಷೆಯ ಮೌಲ್ಯಮಾಪನವನ್ನು ನಿರ್ದಿಷ್ಟ ಪಠ್ಯವಸ್ತುವಿಗೆ ಸಂಬಂಧಿಸಿದ ಸಾಧನೆಗೆ ತಳುಕು ಹಾಕಬೇಕಾಗಿಲ್ಲ. ಅದರ ಬದಲಾಗಿ ಮೌಲ್ಯಮಾಪನವು ಭಾಷಾ ಪ್ರೌಢಿಮೆಯನ್ನು ಅಳೆಯುವಂತಿರಬೇಕು. ಭಾಷಾ ಪ್ರೌಢಿಮೆಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವ ಕೆಲವು ವಿಧಾನಗಳನ್ನು ಚರ್ಚಿಸಿದೆ. ವಿದ್ಯಾರ್ಥಿಗಳಿಗೆ ಆಯ್ಕೆಗಳನ್ನು ನೀಡುವ ಭಾಷಾ ಪರೀಕ್ಷೆಗಳನ್ನು ವಿನ್ಯಾಸಗೊಳಿಸುವ ಮೊದಲು ಭಾಷಾ ಪ್ರೌಢಿಮೆಯ ಮಾನಕಗಳನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳಬೇಕಾಗಿದೆ. ಇದು ಭಾಷಾ ಕಲಿಕೆಯಲ್ಲಿ ನೀಡುವ ಸ್ವಾತಂತ್ರ್ಯ ಹಾಗೂ ಕಲಿಕೆಯ ಪ್ರಮಾಣ ಪತ್ರ ನೀಡಲು ಅಗತ್ಯವಿರುವ ಮಾನಕಗಳ ನಡುವೆ ಸಮತೋಲವನ್ನು ತರುತ್ತದೆ. ಅಂತೆಯೇ ಇದು ಹತ್ತನೇ ತರಗತಿಯ ಹಂತದಲ್ಲಿ ಮಕ್ಕಳು ಇಂಗ್ಲಿಷ್ ನಲ್ಲಿ ಫೇಲಾಗುವ ಸಮಸ್ಯೆಗೆ ಒಂದು ಪರಿಹಾರವನ್ನೂ ಒದಗಿಸುತ್ತದೆ. ಇಂಗ್ಲಿಷ್ ಕಲಿಕೆಯ ಪ್ರಮಾಣಪತ್ರವನ್ನು ಶಾಲಾ ಪಠ್ಯಕ್ರಮದ ಹೊರತಾದ ಬೇರೆ ಯಾವುದಾದರೂ ಪರ್ಯಾಯ ಮಾರ್ಗದ ಮೂಲಕ ನೀಡಬಹುದಾದರೆ ಒಬ್ಬ ವಿದ್ಯಾರ್ಥಿಯು ‘ಇಂಗ್ಲಿಷ್ ಇಲ್ಲದೆಯೇ ಪಾಸಾಗಲು’ ಕೂಡಾ ಅನುವು ಮಾಡಿಕೊಡಬಹುದು.

– – – – –

ಅನುವಾದ: **ಡಾ. ಕುಮಾರ ಸ್ವಾಮಿ ಎಚ್**, ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು

ಮೂಲ ಪ್ರಬಂಧದ ಪೂರ್ಣ ಪಾಠಕ್ಕಾಗಿ ಈ ಕೆಳಗಿನ ಲಿಂಕ್ ನೋಡಬಹುದು.

http://www.ncert.nic.in/new_ncert/ncert/rightside/links/pdf/focus_group/english.pdf